ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1598**
ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ
(ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : **18.03.2021**
ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿರವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣಗೊಂಡಿರುವ ಬನಶಂಕರಿ 6ನೇ ಹಂತದ 4ನೇ 'ಟಿ' ಬ್ಲಾಕ್ (ಮುಂದುವರೆದ ಬಡಾವಣೆ) ನಲ್ಲಿನ ರಸ್ತೆಗಳು ಡಾಂಬರೀಕರಣಗೊಳ್ಳದೆ ಹಾಳಾಗಿದ್ದು, ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು:	110 ಹಳ್ಳಿಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯನ್ನು ಬೆಂಗಳೂರು ಜಲಮಂಡಳಿಯವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕೆಲವು ರಸ್ತೆಗಳಲ್ಲಿ ನಿರ್ವಹಿಸುತ್ತಿದ್ದು, ಸದರಿ ರಸ್ತೆಗಳನ್ನು ಪಾಲಿಕೆ ಮತ್ತು ಜಲಮಂಡಳಿ ವತಿಯಿಂದಲೇ ಅಭಿವೃದ್ಧಿಪಡಿಸಬೇಕಾಗಿರುತ್ತದೆ. ಮುಂದುವರಿದು, ಬನಶಂಕರಿ 6ನೇ ಹಂತ ಮತ್ತು ಮುಂದುವರೆದ ಬನಶಂಕರಿ 6ನೇ ಹಂತದ ಉಳಿಕೆ ರಸ್ತೆಗಳನ್ನು ಅಭಿವೃದ್ಧಿಪಡಿಸಲು ರೂ.100.00 ಕೋಟಿಗಳಿಗೆ ಅಂದಾಜು ತಯಾರಿಸಿ, ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದ್ದು, ಸಭೆಯಲ್ಲಿ ಸದರಿ ಅಂದಾಜು ಪಟ್ಟಿಗೆ ಹಣಕಾಸಿನ ಲಭ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.
(ಆ)	ಈ ಬಡಾವಣೆಯ ರಸ್ತೆಗಳಿಗೆ ಸಂಖ್ಯೆಯನ್ನು ಇದುವರೆವಿಗೂ ನೀಡಿರುವುದಿಲ್ಲ. ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು:	ಸದರಿ ಬಡಾವಣೆಯನ್ನು ನಿರ್ವಹಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿದ ನಂತರ ಪಾಲಿಕೆ ವತಿಯಿಂದ ರಸ್ತೆಗಳಿಗೆ ಸಂಖ್ಯೆ ನೀಡಲು ಕ್ರಮ ವಹಿಸಬೇಕಾಗಿರುತ್ತದೆ.
(ಇ)	ಸದರಿ ಬಡಾವಣೆಯಲ್ಲಿ ಬಹುತೇಕ ವಿದ್ಯುತ್ ತೊಂದರೆ ಉಂಟಾಗುತ್ತಿದ್ದು, ಸೂಕ್ತ ಟ್ರಾನ್ಸ್‌ಫಾರಂನ್ನು ಅಳವಡಿಸುವ ಬಗ್ಗೆ ಇದುವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣವೇನು?	ಸದರಿ ಬಡಾವಣೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈಗಾಗಲೇ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗಿರುತ್ತದೆ. ವಿದ್ಯುತ್ ವ್ಯತ್ಯಯಕ್ಕೆ ಸಂಬಂಧಪಟ್ಟಂತೆ ಬೆಸ್ಕಾಂ ಅಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಲಾಗಿದೆ.

...2

ಈ)	ಸದರಿ ಬಡಾವಣೆಯಲ್ಲಿನ ಒಳಚರಂಡಿ ವ್ಯವಸ್ಥೆಯು ಸಂಪೂರ್ಣ ಹಾಳಾಗಿದ್ದು, ಇದುವರೆವಿಗೂ ದುರಸ್ಥಿಗೊಳಿಸದಿರಲು ಕಾರಣವೇನು:	ಬನಶಂಕರಿ 6ನೇ ಹಂತ ಹಾಗೂ ಮುಂದುವರೆದ ಬನಶಂಕರಿ 6ನೇ ಹಂತ ಬಡಾವಣೆಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಬೆಂಗಳೂರು ಜಲಮಂಡಳಿ ವತಿಯಿಂದ ಕಲ್ಪಿಸಲು ರೂ.164,02,34,951.00 (ಒಂದು ನೂರಾ ಅರವತ್ನಾಲ್ಕು ಕೋಟಿ ಎರಡು ಲಕ್ಷದ ಮೂವತ್ನಾಲ್ಕು ಸಾವಿರದ ಒಂಭೈನೂರ ಐವತ್ತೊಂದು ರೂಪಾಯಿಗಳು ಮಾತ್ರ) ಮೊತ್ತದ ವಿಸ್ತೃತ ಯೋಜನಾ ವರದಿಗೆ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ: 10/21, ದಿನಾಂಕ:30.01.2021 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ತೀರ್ಮಾನಿಸಲಾಯಿತು. ಅದರಂತೆ, ಪ್ರಥಮ ಹಂತವಾಗಿ ಯೋಜನಾ ವೆಚ್ಚದ 1/3 ಭಾಗದಷ್ಟು ಮುಂಗಡ ಠೇವಣಿಯನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಪಾವತಿಸಲು ಹಾಗೂ ಬೆಂಗಳೂರು ಜಲಮಂಡಳಿಯವರು ಟೆಂಡರ್ ಕರೆದು ಕಾಮಗಾರಿಯನ್ನು ಪ್ರಾರಂಭಿಸಲು ಜಲಮಂಡಳಿಯ ಅಧ್ಯಕ್ಷರವರನ್ನು ಕೋರಲು ಮತ್ತು ಕಾಮಗಾರಿಯ ಶೇ.50 ರಷ್ಟನ್ನು ಜಲಮಂಡಳಿಯ ವತಿಯಿಂದಲೇ ಭರಿಸುವ ಬಗ್ಗೆ ಪರಿಶೀಲಿಸಲು ಹಾಗೂ ಉಳಿದ ಮೊಬಲಗನ್ನು ಕಾಮಗಾರಿ ಪ್ರಗತಿಯನ್ನು ಪರಿಶೀಲಿಸಿಕೊಂಡು ಹಂತ ಹಂತವಾಗಿ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದ್ದು, ಅದರಂತೆ ಕ್ರಮ ವಹಿಸಲಾಗುವುದು.
ಉ)	ಸದರಿ ಬಡಾವಣೆಗೆ ಕಾವೇರಿ ನೀರಿನ ವ್ಯವಸ್ಥೆಯನ್ನು ಕಲ್ಪಿಸದಿರುವ ಬಗ್ಗೆ ಕಾರಣ ಹಾಗೂ ಯಾವಾಗ ಕಲ್ಪಿಸಲಾಗುವುದು?	ಬನಶಂಕರಿ 6ನೇ ಹಂತ ಹಾಗೂ ಮುಂದುವರೆದ ಬನಶಂಕರಿ 6ನೇ ಹಂತದ ಬಡಾವಣೆಗಳಿಗೆ ಕಾವೇರಿ ಕುಡಿಯುವ ನೀರಿನ ಪೂರೈಕೆಗಾಗಿ ರೂ.88.20 ಕೋಟಿ ಅಂದಾಜಿಗೆ ಪ್ರಾಧಿಕಾರದ ಅನುಮೋದನೆಯಾಗಿದ್ದು, ಪ್ರಾಧಿಕಾರದ ವತಿಯಿಂದ ಈಗಾಗಲೇ ಬೆಂಗಳೂರು ಜಲಮಂಡಳಿಗೆ ರೂ.50.43 ಕೋಟಿ ಹಣವನ್ನು ಪಾವತಿಸಲಾಗಿರುತ್ತದೆ. ಪ್ರಾಧಿಕಾರದ ಹಣಕಾಸಿನ ಲಭ್ಯತೆಯ ಮೇರೆಗೆ ಉಳಿದ ರೂ.37.77 ಕೋಟಿಗಳ ಪೈಕಿ ಈಗ ರೂ.7.00 ಕೋಟಿ ಹಣವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗಿದೆ. ನಂತರ ತುರ್ತಾಗಿ ಕಾಮಗಾರಿ ಪೂರ್ಣಗೊಳಿಸಿ, ನೀರು ಪೂರೈಸುವಂತೆ ಬೆಂಗಳೂರು ಜಲಮಂಡಳಿಯನ್ನು ಕೋರಲಾಗಿದೆ.

ಸಂಖ್ಯೆ: ನಅಇ 52 ಬೆಂಭೂಸ್ವಾ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ